678 (917) ಶ್ರೀ ಹಾಲಪ್ಪ ಹೆಚ್ (ಹೊಸನಗರ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಹೊಸನಗರ ಹಾಗೂ ಶಿವಮೊಗ್ಗ ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಟ್ರಾ ಕ್ಟರ್ ಹಾಗೂ ಟಿಲ್ಲರ್‌ಗಳನ್ನು ಖರೀದಿಸಲು ಸಹಾಯ ಧನ ಪಡೆದ ರೈತರೆಷ್ಟು ,

ಆ) ಇವುಗಳಲ್ಲಿ ಟ್ರಾ ಕ್ಟರ್ ಹಾಗೂ ಟಿಲ್ಲರ್‌ಗಳು ಚಾಲ್ತಿಯಿರುವುದೆಷ್ಟು ,

ಇ) ಚಾಲ್ತಿಯಲ್ಲಿಲ್ಲದಿರುವ ಟ್ರಾ ಕ್ಟರ್ ಮತ್ತು ಟಿಲ್ಲರ್‌ಗಳೆಷ್ಟು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಹೊಸನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ 19 ರೈತರು ಟ್ರಾಕ್ಟರ್‌ಗಳನ್ನು ಹಾಗೂ 109 ರೈತರು ಟಿಲ್ಲರ್‌ಗಳನ್ನು ಖರೀದಿಸಲು ಸಹಾಯಧನ ಪಡೆದಿರುತ್ತಾರೆ

ಆ) ಎಲ್ಲವೂ ಚಾಲ್ತಿಯಲ್ಲಿರುತ್ತದೆ

ಇ) ಯಾವುದೂ ಇರುವುದಿಲ್ಲ

682 (920) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) – ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006-07ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ನಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾವ ಹಣವೆಷ್ಟು ,

ಆ) ಇದರಲ್ಲಿ ಕೊಡಗು ಜಿಲ್ಲೆಗೆ ಯಾವ ಯಾವ ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ್ (ತೋಟಗಾರಿಕೆ ಸಚಿವರು) –

ಅ) 2006–07ನೇ ಸಾಲಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಹಣ ಇಂತಿದೆ

ವರ್ಷ	ದಿನಾಂಕ	ಬಿಡುಗಡೆಯಾದ ಹಣ (ರೂ ಕೋಟಿಗಳಲ್ಲಿ)
2006–07	26 6 2006	10 00
	10 1 2007	73 48

ಆ) ಕೊಡಗು ಜಿಲ್ಲೆಯ ವಿವಿಧ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ

ಕ್ರ. ಸಂ	ಕಾರ್ಯಕ್ರಮ	ಬಿಡುಗಡೆಯಾದ ಹಣ (ಲಕ್ಷ ರೂ ಗಳಲ್ಲಿ)
1	ಹಣ್ಣುಗಳ ಪ್ರದೇಶ ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮ	66 32
2	ತರಕಾರಿ ಅಭಿವೃದ್ಧಿ ಕಾರ್ಯಕ್ರಮ	3 22
3	ಸಾಂಬಾರು ಬೆಳೆ ಪ್ರದೇಶ ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮ	42 35
4	ಗೋಡಂಬಿ, ಕೋಕೋ ಪ್ರದೇಶ ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮ	14 47
5	ಅಡಿಕೆ ತೋಟಗಳ ಪುನರುಜ್ಜೀವನ	10 50
6	ಹೂವಿನ ಬೆಳೆಗಳ ಪ್ರದೇಶ ವಿಸ್ತರಣೆ ಹಾಗೂ ಅಭಿವೃದ್ಧಿ ಕಾರ್ಯಕ್ರಮ	66 50
7	ಔಷಧಿ ಮತ್ತು ಸುಗಂಧಿತ ಬೆಳೆಗಳ ಪ್ರದೇಶ ವಿಸ್ತರಣೆ ಹಾಗೂ ಅಭಿವೃದ್ಧಿ ಕಾರ್ಯಕ್ರಮ	2 68
8	ಸಮಗ್ರ ಸಸ್ಯ ಪೋಷಕಾಂಶ ನಿರ್ವಹಣೆ ಹಾಗೂ ಕೀಟ ನಿರ್ವಹಣೆ	83 30
9	ಸಾವಯವ ಬೇಸಾಯ ಕಾರ್ಯಕ್ರಮ	31 50
10	ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ	5 15
11	ಮಾರುಕಟ್ಟೆ ಮತ್ತು ಕೊಯ್ಲೋತ್ತರ ನಿರ್ವಹಣಾ ಕಾರ್ಯಕ್ರಮಗಳು	19 74
12	ಮಾನವ ಸಂಪನ್ಮೂಲಾಭಿವೃದ್ಧಿ ಮತ್ತು ತರಬೇತಿ ಕಾರ್ಯಕ್ರಮ	1 33
13	ಮಿಷನ್ ಮ್ಯಾನೇಜ್‌ಮೆಂಟ್ ಕಾರ್ಯಕ್ರಮ	27 48
	ಒಟ್ಟು	374 54